# ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಹರಿಹರ.

ಈ.ಪಿ ನಂಃ 71/09

ಆರ್.ಡಬ್ಲೂಃ 3

| | | |
|---|---|---|
| ಸಾಕ್ಷಿದಾರರ ಹೆಸರು | ಃಃ | ಓಂಕಾರಪ್ಪ |
| ತಂದೆಯ ಹೆಸರು | ಃಃ | ಲೇಟ್ ಲಕ್ಕಪ್ಪ |
| ವಯಸ್ಸು | ಃಃ | 53 ವರ್ಷ |
| ಉದ್ಯೋಗ | ಃಃ | ಅಮೀನರು, ಹರಿಹರದ ಹಿರಿಯ ಸಿವಿಲ್ ನ್ಯಾಯಾಲಯ, ಹರಿಹರ. |
| ವಾಸ ಸ್ಥಳ | ಃಃ | ಹರಿಹರ. |

ದಿನಾಂಕಃ 04.03.2017 ರಂದು ಪ್ರಮಾಣೀಕರಿಸಲಾಯಿತು.

ಃಃಡಿಕ್ರಿದಾರಕರ ಪರ ವಕೀಲರಾದ ಶ್ರೀ ಬಿ.ಎಚ್ ವಕೀಲರಿಂದ ಮುಖ್ಯ ವಿಚಾರಣೆ ಃಃ

ಈ ಪ್ರಕರಣದಲ್ಲಿ ಹಾಜರಾಗಿ ಸಾಕ್ಷಿ ನುಡಿಯುವ ಸಲುವಾಗಿ ನನಗೆ ಸಾಕ್ಷಿ ಸಮನ್ಸ್ ಬಂದಿರುತ್ತದೆ. ಕಳೆದ 5 ವರ್ಷಗಳಿಂದ ನಾನು ಈ ನ್ಯಾಯಾಲಯದಲ್ಲಿ ಬೇಲಿಪ್ ಆಗಿ ಕೆಲಸ ನಿರ್ವಹಿಸುತ್ತಿದ್ದೇನೆ. ಈಗ ತೆರೆದ ನ್ಯಾಯಾಲಯದಲ್ಲಿ ಹಾಜರಿರುವ ಡಿಕ್ರಿದಾರಕಳಾದ ಹಾಲಮ್ಮ ಇವಳನ್ನು ನಾನು ನೋಡಿರುತ್ತೇನೆ. ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ಕೋರ್ಟ್ ಆದೇಶದ ಮೇರೆಗೆ ಪೋಲಿಸರ ಸಹಾಯದಿಂದ ಡೆಲಿವರಿ ವಾರಂಟ್‌ನ್ನು ಸಂಬಂದಪಟ್ಟ ಕಕ್ಷಿದಾರರಿಗೆ ಜಾರಿ ಮಾಡಿ ದಾವಾ ಸ್ವತ್ತಿನ ಸ್ವಾದೀನತೆಯನ್ನು ಡಿಕ್ರಿದಾರಕಳಾದ ಹಾಲಮ್ಮ ಇವಳಿಗೆ ನೀಡಿರುತ್ತೇವೆ. ಈಗ ಸಾಕ್ಷಿದಾರರು ನಿಸಿ-1 ದಾಖಲೆಯನ್ನು ನೋಡುತ್ತಿದ್ದಾರೆ. ಅದು ಸ್ವತ್ತಿನ ಸ್ವಾದೀನ ರಸೀದಿ ಆಗಿರುತ್ತದೆ. ನಿಸಿ-1 ರ ಅನ್ವಯ ಸರ್ವೆ ನಂ 32/1ಪಿ ಕ್ಷೇತ್ರ 1 ಎಕರೆ 5 ಗುಂಟೆ ಮತ್ತು ಸರ್ವೆ ನಂ 22/1 ಕ್ಷೇತ್ರ 2 ಎಕರೆ 15 ಗುಂಟೆ ಈ ಎರಡು ಜಮೀನುಗಳನ್ನು ಡಿಕ್ರಿದಾರಕರ ಇವರ ಸ್ವಾದೀನತೆಗೆ ದಿಃ 23-06-2012 ರಂದು ನೀಡಿರುತ್ತೇನೆ. ಅವರಿಂದ ನಾನು ಆ ಕುರಿತು ಸ್ವಾದೀನ ರಸೀದಿ ಪಡೆದಿರುತ್ತೇನೆ. ನಿಸಿ-1 ನ್ನು ನಾನೇ ಬರೆದಿರುತ್ತೇನೆ. ಅದಕ್ಕೆ ನಾನು ಸಹಿ ಮಾಡಿದ್ದು ನೋಡಿ ಗುರ್ತಿಸುತ್ತಿದ್ದೇನೆ. ಅದನ್ನು ನಿಸಿ-

1(ಈ) ಎಂದು ಗುರ್ತಿಸುತ್ತಿದ್ದೇನೆ. ನಿಸಿ-1 ನ್ನು ತಯಾರಿಸುವಾಗ ಡಿಕ್ರಿದಾರಕಳಾದ ಹಾಲಮ್ಮ, ತಾಲ್ಲೂಕು ಸರ್ವೆಯರ್ ಶ್ರೀನಿವಾಸ, ಇಬ್ಬರು ಪೋಲಿಸ್ ಸಿಬ್ಬಂದಿ ವರ್ಗದವರು ಮತ್ತು ಪಂಚಾಯತಿದಾರರು ಹಾಜರಿದ್ದರು. ಅವರೆಲ್ಲರೂ ಸದರಿ ದಾಖಲೆಗೆ ಸಹಿ ಮಾಡಿರುತ್ತಾರೆ. 1 ಎಕರೆ 5 ಗುಂಟೆ ಜಮೀನಿನಲ್ಲಿ ಯಾವುದೇ ಬಿಲ್ಡಿಂಗ್ ಇರಲಿಲ್ಲ. ಅಲ್ಲಿ ಆ ಸಮಯದಲ್ಲಿ ಯಾವುದೇ ರೀತಿ ಬೆಳೆ ಇರಲಿಲ್ಲ ಅದು ಖಾಲಿ ಜಮೀನಾಗಿತ್ತು.

2. ನಿಸಿ-1 ರ ಪ್ರಕಾರ ಡಿಕ್ರಿದಾರಕಳಿಗೆ ದಾವಾ ಸ್ವತ್ತುಗಳನ್ನು ಸ್ವಾದೀನ ಕೊಟ್ಟ ಹಿನ್ನೆಲೆಯಲ್ಲಿ ಸ್ಥಳದಲ್ಲಿ ಮಹಜರ್ ಮಾಡಲಾಗಿದೆ. ಅದನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-41 ಎಂದು ಗುರ್ತಿಸಲಾಗಿದೆ. ಈ ದಾಖಲೆಯನ್ನು ನಾನೇ ಬರೆದಿರುತ್ತೇನೆ. ಅದನ್ನು ಬರೆಯುವ ಸಮಯದಲ್ಲಿ ಪ್ರಸ್ತುತ ಡಿಕ್ರಿದಾರಕಳು, ತಾಲ್ಲೂಕು ಸರ್ವೆಯರ್ ಶ್ರೀನಿವಾಸ, ಪೋಲಿಸ್ ಸಿಬ್ಬಂದಿ ವರ್ಗದವರು ಮತ್ತು ಪಂಚಾಯತಿದಾರರು ಹಾಜರಿದ್ದರು. ಇವರೆಲ್ಲರೂ ಅದಕ್ಕೆ ಸಹಿ ಮಾಡಿರುತ್ತಾರೆ. ತಾಲ್ಲೂಕಾ ಸರ್ವೆಯರ್ ಶ್ರೀನಿವಾಸ ಮತ್ತು ಡಿಕ್ರಿದಾರಕಳಾದ ಹಾಲಮ್ಮ ಇವರಿಬ್ಬರ ಸಹಿಗಳನ್ನು ಸಾಕ್ಷಿದಾರರು ನೋಡಿ ಗುರ್ತಿಸಿರುವುದರಿಂದ ಅವುಗಳನ್ನು ನಿಪಿ-41 (ಬಿ) ಮತ್ತು ನಿಪಿ-41 (ಸಿ) ಎಂದು ಗುರ್ತಿಸಲಾಯಿತು. ಸದರಿ ದಾಖಲೆಗೆ ಮಹಿಳಾ ಮುಖ್ಯಪೇದೆ ಮತ್ತು ರಾಮಪ್ಪ ಎಂಬಿಬ್ಬರು ಸಹಿ ಮಾಡಿರುತ್ತಾರೆ. ಅವರ ಸಹಿಗಳನ್ನು ನೋಡಿ ಗುರ್ತಿಸುತ್ತಿದ್ದು ಈಗಾಗಲೇ ರಾಮಪ್ಪ ಇವರ ಸಹಿಯನ್ನು ನಿಪಿ-41(ಎ) ಎಂದು ಗುರ್ತಿಸಲಾಗಿದೆ. ಮಹಿಳಾ ಮುಖ್ಯಪೇದೆ ಇವಳ ಸಹಿಯನ್ನು ನೋಡಿ ಸಾಕ್ಷಿದಾರರು ಗುರ್ತಿಸಿರುವುದರಿಂದ ಅದನ್ನು ನಿಪಿ-41(ಡಿ) ಎಂದು ಗುರ್ತಿಸಲಾಯಿತು. ನ್ಯಾಯಾಲಯದ ಆದೇಶದ ಮೇರೆಗೆ ಬೇರೆ-ಬೇರೆ ದಿನಾಂಕಗಳಂದು ಡಿಕ್ರಿದಾರಕಳಿಗೆ ಒಟ್ಟು 5 ಸ್ವತ್ತುಗಳನ್ನು ಅವಳ ಸ್ವಾದೀನ ಅನುಭವಕ್ಕೆ ನೀಡಿರುತ್ತೇನೆ.

3. 4ನೇ ಷಡ್ಯೂಲ್ ಸ್ವತ್ತನ್ನು ಡಿಕ್ರಿದಾರಕಳಿಗೆ ಸ್ವಾದೀನ ಕೊಟ್ಟ ಕುರಿತು ಸ್ಥಳ ಮಹಜರ್ ನೋಡುತ್ತಿದ್ದೇನೆ. ಈ ಮಹಜರ್ ಪ್ರಕಾರ 4ನೇ ಷಡ್ಯೂಲ್ ಸ್ವತ್ತಾದ ಖಲ್ಲಾ ಜಾಗೆ ಪೂರ್ವ ಪಶ್ಚಿಮ 18.23 ಮೀಟರ್ ಮತ್ತು ದಕ್ಷಿಣೋತ್ತರ 3.35 ಮೀಟರ್ ಈ ಪ್ರಕಾರದ ಅಳತೆಯುಳ್ಳ ಸ್ವತ್ತನ್ನು ಸ್ವಾದೀನತೆಗೆ ಕೊಟ್ಟಿರುತ್ತೇನೆ. ಈ ಮಹಜರ್‌ನ್ನು ನಾನೇ ಬರೆದಿದ್ದು ಅದನ್ನು ನೋಡುತ್ತಿದ್ದು ಅದನ್ನು ನಿಪಿ-42 ಎಂದು ಗುರ್ತಿಸಲಾಯಿತು. ನನ್ನ ಸಹಿಯನ್ನು ನೋಡುತ್ತಿದ್ದು ಅದನ್ನು ನಿಪಿ-42(ಎ) ಎಂದು

ಗುರ್ತಿಸಲಾಯಿತು. ಇದನ್ನು ಬರೆಯುವ ಸಮಯದಲ್ಲಿ ಡಿಕ್ರಿದಾರರು, ತಾಲ್ಲೂಕಾ ಸರ್ವೆಯರ್, ಪೋಲಿಸ್ ಸಿಬ್ಬಂದಿ ವರ್ಗದವರು ಮತ್ತು ಪಂಚಾಯತಿದಾರರು ಹಾಜರಿದ್ದರು. ಅವರೆಲ್ಲರೂ ಅದಕ್ಕೆ ಸಹಿ ಮಾಡಿರುತ್ತಾರೆ. ಅದಕ್ಕೆ ಮೇಲ್ಕಂಡ ಹಾಲಮ್ಮ ಮತ್ತು ಸರ್ವೆಯರ್ ಇವರುಗಳು ಸಹಿ ಮಾಡಿರುತ್ತಾರೆ. ನೋಡಿ ಗುರ್ತಿಸುತ್ತಿದ್ದೇನೆ. ಅದನ್ನು ನಿಪಿ-42(ಬಿ) ಮತ್ತು ನಿಪಿ-42(ಸಿ) ಎಂದು ಗುರ್ತಿಸಲಾಯಿತು. ಪೋಲಿಸ್ ಸಿಬ್ಬಂದಿ ವರ್ಗದವರಾದ ಲಲಿತಮ್ಮ ಇವಳು ಹಾಜರಿದ್ದು ಅವರ ಸಹಿ ನೋಡಿ ಗುರ್ತಿಸುತ್ತಿದ್ದು ಅದನ್ನು ನಿಪಿ-42(ಡಿ) ಎಂದು ಗುರ್ತಿಸಲಾಯಿತು. ಮೇಲ್ಕಂಡ ಸ್ವತ್ತನ್ನು ಡಿಕ್ರಿದಾರಕಳ ವಶಕ್ಕೆ ಕೊಟ್ಟು ಅವಳಿಂದ ಸ್ವಾದೀನ ರಸೀದಿಯನ್ನು ಪಡೆದುಕೊಂಡಿರುತ್ತೇನೆ. ಅದನ್ನು ನಿಪಿ-42 ಎಂದು ಗುರ್ತಿಸಲಾಗಿದೆ. ಸ್ಥಳದಲ್ಲಿ ತಾಲ್ಲೂಕಾ ಸರ್ವೆಯರ್ ಹಾಜರಿದ್ದು ಸಂಬಂದಪಟ್ಟ ಸ್ವತ್ತುಗಳನ್ನು ಅಳತೆ ಮಾಡಿ ಸೀಮೆಗಳನ್ನು ಗುರ್ತಿಸಿ ಕಲ್ಲನ್ನು ನೆಟ್ಟಿರುತ್ತಾರೆ. ನ್ಯಾಯಾಲಯದ ಅದೇಶದ ಪ್ರಕಾರ ಮೇಲ್ಕಂಡ ಎಲ್ಲಾ ಸ್ವತ್ತುಗಳನ್ನು ಡಿಕ್ರಿದಾರಕಳಿಗೆ ಕೊಟ್ಟಿರುತ್ತೇವೆ.

ಈ ಸಮಯದಲ್ಲಿ ತಕರಾರುದಾರ ನಂ 1 ಪರ ವಕೀಲರಾದ ಶ್ರೀ ಎಸ್.ಕೆ ಇವರ ವತಿಯಿಂದ ಶ್ರೀ ಬಿ.ಸಿ.ಬಿ ಇವರು ಹಾಜರಿದ್ದು ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುವುದರಿಂದ ಪಾಟೀ ಸವಾಲನ್ನು ಮೂಂದೂಡಲಾಯಿತು.

(ತೆರೆದ ನ್ಯಾ.ದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ)

ಓ ಹೇ ಕೇ ಸರಿ ಇದೆ,

ಹಿರಿಯ ಸಿವಿಲ್ ನ್ಯಾಯಾಧೀಶರು,
ಹರಿಹರ.